<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 74/2023**

| ಸಾಕ್ಷಿಯ ಹೆಸರು | ಶ್ರೀ. ಅಣ್ಣಯ್ಯ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಲೇಟ್ ಸಣ್ಣಪ್ಪ | 1 | 1 |
| ವಯಸ್ಸು | 53 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **09.04.2026.** | |
| ಉದ್ಯೋಗ | PSI ಬಿಡದಿ ಪೊಲೀಸ್ ಠಾಣೆ | | |
| ವಾಸ ಸ್ಥಳ | ಬೆಂಗಳೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 19.05.2021 ರಿಂದ 19.10.2023 ರವರೆಗೆ ಕುಂಬಲಗೋಡು ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 22.06.2022 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ಬಂದ ಠಾಣೆಗೆ ಬಂದ ಮಾಹಿತಿ ಏನೆಂದರೆ ಕಂಬಿಪುರ ರಸ್ತೆಯಿಂದ ಗುಡ್ಡದಮಲರ್ ಗೆ ಹೋಗುವ ರಸ್ತೆಯ ನಿರ್ಜನ ಪ್ರದೇಶದಲ್ಲಿ ಯಾರೋ 4 – 5 ಹುಡುಗರು ಕೈಯಲ್ಲಿ ಆಯುಧಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಓಡಾಡುವ ದಾರಿಹೋಕರು ಮತ್ತು ವಾಹನ ಸವಾರರನ್ನು ತಡೆದು ದರೊಡೆ ಮಾಡುವ ಮತ್ತು ಸುಲಿಗೆ ಮಾಡಲು ಹೊಂಚು ಹಾಕುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ಕೂಡಲೆ ರಾತ್ರಿ ಕರ್ತವ್ಯದಲ್ಲಿ ಸಿಬ್ಬಂದಿಗಳಾದ PC 794 / ಮುರಳಿಧರ್, PC 401 / ಬಸವಲಿಂಗ, PC 735 / ಕೆಂಪಣ್ಣಸ್ವಾಮಿ ಹಾಗೂ ಪಂಚರಾದ ಮಧು ಮತ್ತು ವೇಣುಗೋಪಾಲ್ ಬರಮಾಡಿಕೊಂಡು ಖಾಸಾಗಿ ವಾಹನದಲ್ಲಿ ರಾತ್ರಿ 11.45 ಕ್ಕೆ ಮೇಲ್ಕಂಡ ಸ್ಥಳಕ್ಕೆ ಹೋಗಿ ಸ್ಥಳದಿಂದ ಸ್ವಲ್ಪ ದೂರದಲ್ಲಿ ಹೋಗಿ ನೋಡಲಾಗಿ ಅಲ್ಲಿ 4 – 5 ಜನರು ಇರುವುದು ಕಂಡು ಬಂದಿದ್ದು ಅವರು ಆಯುಧಗಳನ್ನು ಬಿಸಾಡಿ ಓಡಿ ಇಬ್ಬರು ಓಡಿ ಹೋದರು. ನಾನು ಮತ್ತು ಸಿಬ್ಬಂದಿ ಸುತ್ತು ವರಿದು 3 ಆಸಾಮಿಗಳನ್ನು ಹಿಡಿದುಕೊಂಡು ಅವರ ಹೆಸರು ವಿಳಾಸ ಕೇಳಲಾಗಿ ಮುಬಾರಕ್, ಸಲೀಂ ಪಾಷ ಮತ್ತು ಸೈಯದ್ ನಜೀರ್ ಎಂದು ತಿಳಿದು ಬಂದಿದ್ದು ಓಡಿ ಹೋದವರ ಹೆಸರು ಸೈಯದ್ ರಹೀಮ್ ಹಾಗೂ ವಾಹೀದ್ ಎಂದು ತಿಳಿದು ಬಂತು. ನಾವು ವಶಕ್ಕೆ ಪಡೆದವರ ಬಳಿ ಇದ್ದ 3 ಜನರ ಮೂರು ಮೊಬೈಲ್ ಗಳು, ಮುಬಾರಕ್ ರವರ ಜೇಬಿನಲ್ಲಿ ಖಾರದ ಪುಡಿ ಪ್ಯಾಕೇಟ್, ಹಾಗೂ ಬಿಸಾಡಿದ ಒಂದು ಚಾಕು ಮತ್ತು ಒಂದು ಮರದ ಹಿಡಿಕೆ ಇರುವ ಕತ್ತಿ

ಗಳನ್ನು ಪಂಚರ ಮೂಲಕ ಅಮಾನತು ಪಡಿಸಿಕೊಂಡೆವು. ಮಹಜರ್ ಅನ್ನು ರಾತ್ರಿ 12.15 ರಿಂದ 1.15 ರವರೆಗೆ ಮಾಡಿರುತ್ತೇನೆ. ಮಹಜರ್ ಅನ್ನು ನಿಶಾನೆ.ಪಿ. 1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ 3 ಮೊಬೈಲ್ ಗಳನ್ನು ಮು.ಮಾ. 1 ರಿಂದ 3 ಎಂದು, ಖಾರದ ಪುಡಿ ಪ್ಯಾಕೇಟ್ ಅನ್ನು ಮು.ಮಾ. 4 ಎಂದು, ಒಂದು ಚಾಕು ಮು.ಮಾ. 5 ಎಂದು ಮತ್ತು ಒಂದು ಮರದ ಹಿಡಿಕೆ ಇರುವ ಕತ್ತಿಯನ್ನು ಮು.ಮಾ. 6 ಎಂದು ಗುರುತಿಸಲಾಯಿತು.

2. ನಂತರ ವಶಕ್ಕೆ ಪಡೆದ ಆರೋಪಿತರು ಮತ್ತು ಮಾಲಿನ ಸಮೇತಾ ಠಾಣೆಗೆ ರಾತ್ರಿ 2.00 ಕ್ಕೆ ವಾಪಸ್ಸು ಬಂದು ಸ್ವ ವರದಿ ತಯಾರು ಮಾಡಿ ಎ.ಎಸ್.ಐ. ಸುರೇಶ್ ರವರಿಗೆ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ನಿಶಾನೆ.ಪಿ. 2 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಎ) ಎಂದು ಗುರುತಿಸಲಾಯಿತು. ನ್ಯಾಯಲಾಯದ ಮುಂದೆ ಇರುವ ಆರೋಪಿ ನಂ. 2, 4 ಮತ್ತು 5 ಅನ್ನು ಸಾಕ್ಷಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ 2 ಮತ್ತು 5 ಆರೋಪಿತರ ಪರ ಶ್ರೀ. **CS** ವಕೀಲರಿಂದ :

ದಿನಾಂಕ 22.06.2022 ರಂದು ನಾನು ಠಾಣಾ ಸರಹದ್ದಿನಲ್ಲಿ ಗಸ್ತು ಮಾಡುತ್ತಿದ್ದೆ. ನಾನು ಅಂಚೆಪಾಳ್ಯ ಕಂಬಿಪುರದ ಬಳಿ ಗಸ್ತಿನಲ್ಲಿ ಇದ್ದೆ. ಆ ಸಮಯದಲ್ಲಿ ಆ ಜಾಗದಲ್ಲಿ ಕತ್ತಲು ಇತ್ತು ಆದರೆ ಬೀದಿ ದೀಪ ಇತ್ತು. ಓಡಿ ಹೋದ ಆರೋಪಿತರು ಆಯುಧಗಳನ್ನು ಬಿಸಾಡಿ ಹೋಗಿದ್ದರು. ಆ ಸ್ಥಳದಲ್ಲಿ ಜನರು ಓಡಾಡುತ್ತಿರಲಿಲ್ಲ. ಅಪಾರ್ಟಮೆಂಟ್ ಮತ್ತು ವಿಲ್ಲಾಗಳಿಗೆ ಓಡಾಡುವ ಜನರು ಮಾತ್ರ ಓಡಾಡುತ್ತಾರೆ. ಅಪಾರ್ಟಮೆಂಟ್ ಮತ್ತು ವಿಲ್ಲಾಗಳಲ್ಲಿ CCTV ಇದೆ ಆದರೆ ಆ ರಸ್ತೆಯಲ್ಲಿ ಇರಲಿಲ್ಲ. ಆ 3 ಮೊಬೈಲ್ ಗಳು ಯಾರು ಯಾರಿಗೆ ಸೇರಿದ್ದು ಎಂದು ನಮೂದು ಮಾಡಿಲ್ಲ ಮು.ಮಾ. 1 ರಿಂದ 5 ಅಂಗಡಿಗಳಲ್ಲಿ ಸಮಾನ್ಯವಾಗಿ ಸಿಗುತ್ತವೆ ಎಂದರೆ ಇರಬಹುದು. ಖಾರದ ಪುಡಿ ಪೊಟ್ಟಣದ ಮೇಲೆ ಅದು ದಿನಾಂಕ 07-2022 ಎಂದು ನಮೂದು ಆಗಿದ್ದು ಎಂದರೆ ಸರಿ ಅಲ್ಲ. ಮು.ಮಾ. ಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಹಾಗೂ ಅವುಗಳನ್ನು ಸೃಷ್ಟಿ ಮಾಡಿದ್ದು ಎಂದರೆ ಸರಿಅ ಲ್ಲ. ಮನೆಯಲ್ಲಿ ಇದ್ದ ಆರೋಪಿತರನ್ನು ಕರೆ ತಂದು ಸುಳ್ಳು ಪ್ರಕರಣಕ್ಕೆ ಸೇರಿಸಿದ್ದೇವೆ ಎಂದರೆ ಸರಿ ಅಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ 4 ನೇ ಆರೋಪಿತರ ಪರ ವಕೀಲರು ಗೈರು ಹಾಜರು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.